( ದಿಃ07/01/2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು )

<u>ಪಿ.ಡಬ್ಲ್ಯೂ3 ರವರ ಮುಖ್ಯ ವಿಚಾರಣೆ ಶ್ರೀ.ಹೆಚ್.ಆರ್.ಎನ್.ವಕೀಲರಿಂದ</u>

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮುಖೇನ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ. ಅದರಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

( ಶ್ರೀ.ಯೋಗೇಶ್ )
ಸಿವಿಲ್ ನ್ಯಾಯಾಧೀಶರು, ಅರಕಲಗೂಡು

( ದಿಃ03/03/2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು )

ಪಿ.ಡಬ್ಲ್ಯೂ 3 ರವರ ಪಾಟೀ ಸವಾಲು ಶ್ರೀ. ಸಿ ವಿ ಎನ್ ವಕೀಲರಿಂದ

ವಾದಿಯರು ನನಗೆ ಅಣ್ಣತಮ್ಮಂದಿರು ಆಗಬೇಕು. ದಾವೆಯನ್ನು ಪುಟ್ಟಸ್ವಾಮಿಗೌಡ ಹಾಕಿರುತ್ತಾರೆ. ಅವರು ಯಾವ ಕಾರಣಕ್ಕೆ ಹಾಕಿದ್ದಾರೆ ಎಂದು ತಿಳಿದುಕೊಂಡಿಲ್ಲ. ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಏನು ಬರೆದಿದೆ ಗೊತ್ತಿಲ್ಲ. ನನಗೆ ಗೊತ್ತಿರುವ ವಿಚಾರ ಹೇಳಿ ವಕೀಲರ ಮೂಲಕ ಬರೆಸಿರುತ್ತೇನೆ. ರಂಗೇಗೌಡ ಬಿನ್ ಬಸವೇಗೌಡ ಎಂದರೆ ಪ್ರತಿವಾದಿಯ ತಂದೆ. ದಾವಾದ ಆಸ್ತಿಯ ಉತ್ತರ ದಿಕ್ಕಿಗೆ ಹನುಮಮ್ಮನ ಆಸ್ತಿಯ ನಂತರ ನನ್ನ ಆಸ್ತಿ ಇದೆ. ಸರ್ವೆ ನಂ 21, 22 ಇರಬಹುದು. ದಾವೆಯನ್ನು ಸರ್ವೆ ನಂ 20 ರಲ್ಲಿ 14 ಗುಂಟೆ, ಸರ್ವೆ ನಂ. 21 ರಲ್ಲಿ 1 ಎಕರೆ 14 ಗುಂಟೆಗೆ ಹಾಕಿರುತ್ತಾರೆ. 1 ನೇ ವಾದಿಯು ನ್ಯಾಯಾಲಯಕ್ಕೆ ಕರೆದುಕೊಂಡು ಬಂದರು. ದಾವಾದ ಆಸ್ತಿಯು ಪ್ರತಿವಾದಿಯ ಹಕ್ಕು ಸ್ವಾದೀನದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರು ಸಹೋದರರಾಗಬೇಕಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

( ಶ್ರೀ.ಯೋಗೇಶ್ )
ಸಿವಿಲ್ ನ್ಯಾಯಾಧೀಶರು, ಅರಕಲಗೂಡು